892(1289) ಶ್ರೀ ಕೃಷ್ಣಮೂರ್ತಿ ಕೆ ಎಂ (ಕಡೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಗಣಿ ವಾಹನಗಳು ಚಲಿಸುತ್ತಿರುವುದರಿಂದ ಹಾಳಾಗಿರುವ ಅಲ್ಲಿನ ರಸ್ತೆಗಳ ಸುಧಾರಣೆ ಮಾಡಲು ಸರ್ಕಾರ ಆರ್ಥಿಕ ಸಹಾಯ ಮಾಡಲಿದೆಯೇ,

ಆ) ಕಡೂರು ವಿದಾನ ಸಭಾ ಕ್ಷೇತ್ರಕ್ಕೆ NABARD ಮತ್ತು CRF ಯೋಜನೆಯಡಿ ಎಷ್ಟು ಆರ್ಥಿಕ ನೆರವನ್ನು ಒದಗಿಸಲಾಗಿದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಡೂರು ವಿಧಾನಸಭಾ ವ್ಯಾಪ್ತಿಯಲ್ಲಿನ ಲೋಕೋಪಯೋಗಿ ಇಲಾಖೆ ರಸ್ತೆಗಳಲ್ಲಿ ಗಣಿ ವಾಹನಗಳು ಚಲಿಸುತ್ತಿರುವ ರಸ್ತೆಗಳ ಸುಧಾರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ

ಆ) ಕಡೂರು ವಿಧಾನಸಭಾ ಕ್ಷೇತ್ರದಲ್ಲಿ ನಬಾರ್ಡ್ ಮತ್ತು ಸಿಆರ್ಎಫ್ ಯೋಜನೆಯಡಿ ಒದಗಿಸಿದ ಆರ್ಥಿಕ ನೆರವು ಈ ಕೆಳಕಂಡಂತಿದೆ

1) ನಬಾರ್ಡ್ ರೂ 611 96 ಕೋಟಿ

2) ಕೇಂದ್ರ ರಸ್ತೆ ಯೋಜನೆಯಡಿ ರೂ 100 ಕೋಟಿ

893(896) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳಗಾವಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ಪಟ್ಟಣದಲ್ಲಿ ಕೆಎಸ್ಆರ್ಟಿಸಿ ಬಸ್ ಡಿಪೋ ಪ್ರಾರಂಭಿಸಲು ಸಾರ್ವಜನಿಕರಿಂದ ಬೇಡಿಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಮಧುಗಿರಿ ತಾಲ್ಲೂಕು ಸಂಪೂರ್ಣವಾಗಿ ರಾಷ್ಟ್ರೀಕೃತವಾಗಿರುವುದಿಲ್ಲ ಸದರಿ ತಾಲ್ಲೂಕಿನಲ್ಲಿ ಖಾಸಗಿಯವರು ಹೇರಳವಾಗಿ ತಮ್ಮ ಸಾರಿಗೆಗಳನ್ನು ಕಾರ್ಯಾಚರಣೆ ಮಾಡುತ್ತಿದ್ದಾರೆ ಆದುದರಿಂದ, ಮಧುಗಿರಿಯಲ್ಲಿ ಘಟಕ ಸ್ಥಾಪಿಸುವ ಅವಶ್ಯಕತೆಯಿಲ್ಲ

894(897) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ ಎ ಎಸ್, ಐ ಪಿ ಎಸ್ ಮತ್ತು ಐ ಎಫ್ ಎಸ್, ಅಧಿಕಾರಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

ಆ) ಈ ಅಧಿಕಾರಿಗಳ ವಿರುದ್ಧ ಬಾಕಿಯಿರುವ ವಿವಿಧ ವಿಚಾರಣೆಗಳು ಮತ್ತು ಆ ಸಂಬಂಧದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಬಾಕಿ ವಿವರಣೆವಾರು ವಿವರ ನೀಡುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ)

| ವೃಂದ | ಕರ್ನಾಟಕ ರಾಜ್ಯ ಸರ್ಕಾರದಲ್ಲಿ | ಕೇಂದ್ರ ಸರ್ಕಾರ, ಇತರೆ ರಾಜ್ಯ ಸರ್ಕಾರ ಮತ್ತು ವಿದೇಶದಲ್ಲಿ ನಿಯೋಜನೆ | ಒಟ್ಟು |
|---|---|---|---|
| ಐ ಎ ಎಸ್ | 201 | 37 | 238 |
| ಐ ಪಿ ಎಸ್ | 125 | 10 | 135 |
| ಐ ಎಫ್ ಎಸ್ | 155 | 06 | 161 |

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

**ಇಲಾಖಾ ವಿಚಾರಣೆ ಎದುರಿಸುತ್ತಿರುವ ಐ ಎಫ್ ಎಸ್ ಅಧಿಕಾರಿಗಳ ವಿವರಗಳು**

| ಕ್ರ ಸಂ | ಅಧಿಕಾರಿಯ ಹೆಸರು ಶ್ರೀಯುತರು | ಆರೋಪದ ಸಂಕ್ಷಿಪ್ತ ವಿವರ | ಪ್ರಸ್ತುತ ಹಂತದ ಬಗ್ಗೆ ಮಾಹಿತಿ |
|---|---|---|---|
| **ಇಲಾಖಾ ವಿಚಾರಣೆ ಎದುರಿಸುತ್ತಿರುವ ಐ ಎ ಎಸ್ ಅಧಿಕಾರಿಗಳ ವಿವರಗಳು** | | | |
| 1 | ಶ್ರೀಮತಿ ಆರ್ ಎಸ್ ಸುಜಾತ, ಐ ಎ ಎಸ್ | ಮಹಿಳಾ ಮತ್ತು ಮಕ್ಕಳಾ ಅಭಿವೃದ್ಧಿ ಇಲಾಖೆ, ಬೆಂಗಳೂರು ಇಲ್ಲಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ನಮಯದಲ್ಲಿ ಐ ಸಿ ಡಿ ಎಸ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ಅವ್ಯವಹಾರಗಳ ಬಗ್ಗೆ | ಭಾರತದ ಆಡಳಿತ ಸೇವಾ (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳ 1969 ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಿ ಆವಾದಿತ ಅಧಿಕಾರಿಗಳಿಗೆ ಶಿಕ್ಷೆಯನ್ನು ವಿಧಿಸುವ ಕುರಿತು ನಿಯಮನುಸಾರ |

| | | | |
|---|---|---|---|
| | | | ಪ್ರಸ್ತಾವನೆಯನ್ನು ಕೇಂದ್ರ ಲೋಕಸೇವಾ ಆಯೋಗಕ್ಕೆ ಕಳುಹಿಸಲಾಗಿದೆ |
| 2 | ಶ್ರೀ ಎ ಕೆ ಮೋನಪ್ಪ, ಐ ಎ ಎನ್ | 1988ನೇ ಸಾಲಿನಲ್ಲಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಗಳ ನೇಮಕಾತಿ ಬಗ್ಗೆ ನಡೆದ ಪರೀಕ್ಷೆಯಲ್ಲಿ ಅವ್ಯವಹಾರಗಳಲ್ಲಿ ತೊಡಗಿರುವ ಬಗ್ಗೆ | ಭಾರತ ಆಡಳಿತ ಸೇವಾ (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳ 1969 ಅಡಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲಾಗಿದೆ ಹಾಗೂ ವಿಚಾರಣಾ ವರದಿ ಸರ್ಕಾರ ಪರಿಶೀಲನೆಯಲ್ಲಿದೆ |
| 3 | ಶ್ರೀ ಎನ್ ನಾಗಂಭಿಕ ದೇವಿ, ಐ ಎ ಎಸ್ | ಜಿಲ್ಲಾ ಪಂಚಾಯತ್, ಕಾರವಾರ ಇಲ್ಲಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ | ಭಾರತ ಆಡಳಿತ ಸೇವಾ (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳು 1969ರನುಸಾರ ವಿಚಾರಣೆಗೆ ಆದೇಶಿಸಿದ್ದು, ವಿಚಾರಣೆ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ |

| | | | |
|---|---|---|---|
| 4 | ಡಾ ಐ ದೇವೇಂದ್ರ<br>ಐ ಎ ಎಸ್ | ಬ್ಯಾಡಗಿ, ಹುಬ್ಬಳ್ಳಿ,<br>ಶಿವಮೊಗ್ಗ,<br>ಸಿಂಧನೂರು,<br>ಚಿತ್ರದುರ್ಗ ಮತ್ತು<br>ರಾಣೆಬೆನ್ನೂರು ಇಲ್ಲಿನ<br>ವ್ಯವಸಾಯ ಉತ್ಪನ್ನ<br>ಮಾರುಕಟ್ಟೆಗಳಿಗೆ<br>ವಿದ್ಯುತ್<br>ಕಾಮಗಾರಿಗಳನ್ನು<br>ಮಂಜೂರಾತಿ<br>ನೀಡುವಲ್ಲಿ<br>ಸಾರ್ವಜನಿಕ<br>ಸಂಗ್ರಹಣೆ ಕಾಯ್ದೆ-<br>ನಿಯಮ 1999ನ್ನು<br>ಉಲ್ಲಂಘಿಸಿರುವ ಬಗ್ಗೆ | ಭಾರತ ಆಡಳಿತ<br>ಸೇವಾ (ಶಿಸ್ತು<br>ಮತ್ತು ಮೇಲ್ಮನವಿ)<br>ನಿಯಮಗಳ<br>1969ರ ನಿಯಮ<br>8ರ ಅಡಿಯಲ್ಲಿ<br>ಕಾರಣ ಕೇಳುವ<br>ನೋಟೀಸ್ ಮತ್ತು<br>ದೋಷಾರೋಪಣ<br>ಪಟ್ಟಿಯನ್ನು<br>ಹೊರಡಿಸಲಾಗಿದ್ದು,<br>ಕಾರಣ ಕೇಳುವ<br>ನೋಟೀಸಿಗೆ<br>ಆಪಾದಿತಾ<br>ಅಧಿಕಾರಿಗಳು<br>ಸಲ್ಲಿಸಿರುವ<br>ಉತ್ತರವು<br>ಸರ್ಕಾರದ<br>ಪರಿಶೀಲನೆಯಲ್ಲಿದೆ |
| 5 | ಶ್ರೀ ಜಿ ಎಲ್ ಚಂದ್ರ<br>ಶೇಖರಯ್ಯ<br>ಐ ಎ ಎಸ್ | ಜಿಲ್ಲಾಧಿಕಾರಿ<br>ಚಾಮರಾಜನಗರ ಜಿಲ್ಲೆ<br>ಇಲ್ಲಿ ಕರ್ತವ್ಯ<br>ನಿರ್ವಹಿಸುತ್ತಿದ್ದ<br>ಸಮಯದಲ್ಲಿ ಪರಿಶಿಷ್ಟ<br>ಜಾತಿ ಮತ್ತು ಪರಿಶಿಷ್ಟ<br>ವಂಗಡಗಳಿಗೆ<br>ಕಾಯ್ದಿರಿಸಿದ<br>ತುಂಬದೇ ಇರುವ<br>ಹುದ್ದೆಗಳನ್ನು<br>ತುಂಬುವಲ್ಲಿ<br>ಅವ್ಯವಹಾರ ಬಗ್ಗೆ | ಭಾರತ ಆಡಳಿತ<br>ಸೇವಾ (ಶಿಸ್ತು<br>ಮತ್ತು ಮೇಲ್ಮನವಿ)<br>ನಿಯಮಗಳು<br>1969ರನ್ವಯ<br>ವಿಚಾರಣೆಗೆ<br>ಆದೇಶಿಸಿದ್ದು<br>ಇಲಾಖಾ<br>ವಿಚಾರಣೆಗೆ<br>ಪ್ರಗತಿಯಲ್ಲಿರುತ್ತದ |

| | | | |
|---|---|---|---|
| 6 | ಶ್ರೀ ಕೆ ಶಿವರಾಮು, ಐ ಎ ಎಸ್ | ರಾಜ್ಯದಲ್ಲಿನ ನಿರುದ್ಯೋಗಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ವೋಕೇಷನ್ ಮತ್ತು ಕಂಪ್ಯೂಟರ್ ತರಬೇತಿ ಕಾರ್ಯಕ್ರಮಕ್ಕಾಗಿ ಇರುವ ಹಣವನ್ನು ದುರುವಯೋಗ ಪಡಿಸಿ ಕೊಂಡಿರುವ ಬಗ್ಗೆ | ಭಾರತ ಆಡಳಿತ ನೇವಾ (ಶಿಸ್ತು ಮತ್ತು ಮೇಲ್ಮನವಿ) ನಿಯಮಗಳು 1969ರ ನಿಯಮ 8ರ ಅಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ಹೊರಡಿಸಿದ್ದು, ಅವಾದಿತ ಅಧಿಕಾರಿಯಿಂದ ಉತ್ತರ ಸ್ವೀಕರಿಸಿದ್ದು ಇದನ್ನು ವರಿಶೀಲಿಸ ಲಾಗುತ್ತಿದೆ |

**ಇಲಾಖಾ ವಿಚಾರಣೆ ಎದುರಿಸುತ್ತಿರುವ ಐ ಪಿ ಎಸ್ ಅಧಿಕಾರಿಗಳ ವಿವರಗಳು**

| ಕ್ರ. ಸಂ | ಅಧಿಕಾರಿಯ ಹೆಸರು ಶ್ರೀಯುತರು | ಆರೋಪದ ಸಂಕ್ಷಿಪ್ತ ವಿವರ | ಪ್ರಸ್ತುತ ಹಂತದ ಬಗ್ಗೆ ಮಾಹಿತಿ |
|---|---|---|---|
| 1 | ಜಯಪ್ರಕಾಶ್ ವಿ ನಾಯಕ್, ಐ ಪಿ ಎಸ್ | ಸಕ್ಷಮ ವ್ರಾಧಿಕಾರದಿಂದ ರಜಾ ಮಂಜೂರಾತಿ ಮಾಡಿಸಿಕೊಳ್ಳದೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾಕ್ಕೆ ಭೇಟಿ ನೀಡಿದ ಬಗ್ಗೆ | ಎ ಐ ಎಸ್ (ಡಿ ಮತ್ತು ಎ) ನಿಯಮ ಗಳಾನುಸಾರ ವಿಚಾರಣೆಗೆ ಆದೇಶಿಸಿದ್ದು ವಿಚಾರಣೆ ವರದಿ ನಿರೀಕ್ಷಿಸಲಾಗಿದೆ |
| 2 | ಬಿ ಶ್ರೀಕಂರಪ್ಪ, ಐ ಪಿ ಎಸ್ | ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕಿನ ನಾಲ ಸೌಲಭ್ಯಗಳು ಕೆ ಎನ್ ಆರ್ ಪಿ | ಎ ಐ ಎಸ್ (ಡಿ ಮತ್ತು ಎ) ನಿಯಮ ಗಳಾನುಸಾರ |

| | | | |
|---|---|---|---|
| | | ಪೊಲೀಸ್ ಸಿಬ್ಬಂದಿಗೆ ಗೃಹೋಪಯೋಗಿ ಉಪಕರಣ ಮಾರಾಟದ ವ್ಯವಸ್ಥೆ ಮಾಡಿರುವ ಬಗ್ಗೆ | ಆರ್ಟಿಕಲ್ ಆಫ್ ಚಾರ್ಜಸ್ ನೊಂದಿಗೆ ನೀಡಿದ ನೋಟೀಸಿಗೆ ಅಧಿಕಾರಿಯೂ ಉತ್ತರವನ್ನು ನೀಡಿದ್ದು ಉತ್ತರವು ಸರ್ಕಾರದ ಪರಿಶೀಲನೆ ಯಲ್ಲಿದೆ |
| 3 | ಪಿ ಮುನಿಸ್ವಾಮಿ, ಐ ಪಿ ಎಸ್ | ಶ್ರೀ ದ್ಯಾವಪ್ಪ ಇವರು 2ನೇ ಅಡಿಷನಲ್ ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು ಇಲ್ಲಿ ಹೂಡಿದ ಭೂ ವ್ಯಾಜ್ಯ ಓ ಎಸ್ ಸಂಖ್ಯೆ 4780/94 ಕುರಿತಂತೆ ಕಂಡಿಕೆವಾರು ವರಾ ಮತ್ತು ದಾಖಲಾತಿ ಗಳನ್ನು ಸಕಾಲದಲ್ಲಿ ಒದಗಿನದೇ ಕರ್ತವ್ಯ ಚ್ಯುತಿ ಎಸಗಿರುವ ಬಗ್ಗೆ | ಎ ಐ ಎಸ್ (ಡಿ ಮತ್ತು ಎ) ನಿಯಮ ಗಳಾನುಸಾರ ವಿಚಾರಣೆಗೆ ಆದೇಶಿಸಿದ್ದು ವಿಚಾರಣೆ ವರದಿ ನಿರೀಕ್ಷಿಸಲಾಗಿದೆ |
| 4 | ಖಲೀಲ್ ಉರ್ ರಹಮಾನ್, ಐ ಪಿ ಎಸ್ | ತಮ್ಮ ಹೆಂಡತಿ ಮತ್ತು ಮಗನ ಹೆಸರಿನಲ್ಲಿ ರೂ 10 00 ಲಕ್ಷ ಸಾಲ ಪಡೆಯಲು ಪ್ರಥಮ ದರ್ಜೆ ಗುಮಾಸ್ತರಾದ ಶ್ರೀಮತಿ ಸರಳ ರವರ ರೂ 23–00 ಲಕ್ಷ | ಎ ಐ ಎಸ್ (ಡಿ ಮತ್ತು ಎ) ನಿಯಮಗಳಾನು ಸಾರ ಆರ್ಟಿಕಲ್ ಆಫ್ ಚಾರ್ಜಸ್ ನೊಂದಿಗೆ ನೀಡಿದ |

| | | | |
|---|---|---|---|
| | | ಮೌಲ್ಯದ ಆಸ್ತಿ ಒತ್ತೆ ಇಡಲು ಅನುಮತಿ ನೀಡಿರುವ ಮತ್ತು ಲಾರ್ಡ್ ಕೃಷ್ಣ ಬ್ಯಾಂಕಿನಿಂದ ರೂ 17-00 ಲಕ್ಷ ಸಾಲ ತಮ್ಮ ಹೆಂಡತಿಯ ಹೆಸರಿನಲ್ಲಿ ಪಡೆಯಲು ಶ್ರೀಮತಿ ಸರಳರವರನ್ನು 2ನೇ ಖಾತರಿದಾರರನ್ನಾಗಿಸಲು ಒತ್ತಾಯಿಸಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ | ನೋಟೀಸಿಗೆ ಅಧಿಕಾರಿಯೂ ಉತ್ತರವನ್ನು ನೀಡಿದ್ದು ಉತ್ತರವು ಸರ್ಕಾರದ ಪರಿಶೀಲನೆ ಯಲ್ಲಿದೆ |
| 5 | ಯು ಎಸ್ ಬಘೇಲ್, ಐ ಪಿ ಎಸ್ | ಶ್ರೀಯುತರನ್ನು ಯು ಎನ್ ಇಂಟರ್ ನ್ಯಾಷನಲ್ ಕ್ರಿಮಿನಲ್ ಟ್ರಿಬ್ಯೂನಲ್ ರಾಂಡ ಟಾಂಜೇನಿಯ ಇಲ್ಲಿಗೆ ದಿನಾಂಕ 4-2-2005 ರ ಅವಧಿಯವರೆಗೆ ಮಾತ್ರ ನಿಯೋಜಿಸಿದ್ದು ಹಿಂತಿರುಗುವಂತೆ ನೂಚಿಸಿದ್ದರೂ ಇನ್ನು ನಿಯೋಜನೆಯಲ್ಲೇ ಮುಂದುವರಿಯುತ್ತಿರುವ ಬಗ್ಗೆ | ಎ ಐ ಎಸ್ (ಡಿ ಮತ್ತು ಎ) ನಿಯಮ ಗಳಾನುಸಾರ ಆರ್ಟಿಕಲ್ ಆಫ್ ಚಾರ್ಜನ್ ನೊಂದಿಗೆ ನೋಟೀನ್ ನೀಡಿದ್ದು ಉತ್ತರ ನಿರೀಕ್ಷಿಸಲಾಗಿದೆ |

**ಇಲಾಖಾ ವಿಚಾರಣೆ ಎದುರಿಸುತ್ತಿರುವ ಐ ಎಫ್ ಎಸ್ ಅಧಿಕಾರಿಗಳ ವಿವರಗಳು**

| | | | |
|---|---|---|---|
| 1 | ಎ ಎಂ ಅಣ್ಣಯ್ಯ ಐಎಫ್ಎಸ್ | ನಾಗರಹೊಳೆ ರಾಷ್ಟ್ರೀಯ ಉದ್ಯನವನ ಇಲ್ಲಿ ಎನ್ಎಸ್ಎಸ್ | ವಿಚಾರಣಾ ವರದಿ ಸ್ವೀಕೃತವಾಗಿದ್ದು ಸರ್ಕಾರದ |

| | | | |
|---|---|---|---|
| | | ಕ್ಯಾಂಪ್‌ನ ವಿದ್ಯಾರ್ಥಿ ನಿಯರೊಂದಿಗೆ ಅಸಭ್ಯವಾಗಿ ವರ್ತಿಸಿರುವ ಬಗ್ಗೆ | ಪರಿಶೀಲನೆಯಲ್ಲಿದೆ |
| 2 | ಹೆಚ್‌ಎಸ್‌ಎಸ್ ಮೂರ್ತಿ, ಐಎಫ್‌ಎಸ್ | ದ್ವಿಪತ್ನಿತ್ವದ ಬಗ್ಗೆ | ವಿಚಾರಣಾ ವರದಿ ಸ್ವೀಕೃತವಾಗಿದ್ದು ಕರಿಣ ದಂಡನೆ ವಿಧಿಸುವ ಬಗ್ಗೆ ಪರಿಶೀಲಿಸ ಲಾಗುತ್ತಿದೆ |
| 3 | ಮನೀತ್ ಪಾರಕ್, ಐಎಫ್‌ಎಸ್ | 1) 10 ಹೊಸ ಸಾ ಮಿಲ್ಲುಗಳನ್ನು ಪ್ರಾರಂಭಿಸಲು ಅನುಮತಿ/ಎನ್‌ಓ ಸಿ ನೀಡಿರುವ ಬಗ್ಗೆ<br>2) ಸರ್ಕಾರಕ್ಕೆ ಮುಟ್ಟುಗೋಲು ಹಾಕಿರುವ ಮ್ಯಾಟೀಜ್ ಕಾರನ್ನು ದುರುಪಯೋಗ ಪಡಿಸಿ ಕೊಂಡಿರುವ ಬಗ್ಗೆ<br>3) ಅಂಗೀಕೃತ ಕಾರ್ಯ ಯೋಜನೆಗೆ ವ್ಯತಿರಿಕ್ತವಾಗಿ ಕಾರ್ಯ ನಿರ್ವಹಿಸಿ ಅಕ್ರಮ ಎಸಗಿರುವ ಬಗ್ಗೆ | 1) ವಿಚಾರಣಾ ವರದಿ ಇದೀಗ ಸ್ವೀಕೃತವಾಗಿದೆ<br>2) ವಿಚಾರಣಾ ವರದಿ ಇದೀಗ ಸ್ವೀಕೃತವಾಗಿದೆ<br>3) ವಿಚಾರಣಾ ಅಧಿಕಾರಿ ಗಳಿಂದ ವರದಿ ನಿರೀಕ್ಷಿಸ ಲಾಗುತ್ತಿದೆ<br>4) ವಿಚಾರಣಾ ಅಧಿಕಾರಿಗ ಳಿಂದ ವರದಿ ನಿರೀಕ್ಷಿಸ |

| | | | |
|---|---|---|---|
| | | 4) ಕೊಪ್ಪ ವಿಭಾಗದ ಕೌರಿ ಎಸ್ಟೇಟ್‌ನಲ್ಲಿ ಚಿರತೆಯೊಂದು ಅನಹಜವಾಗಿ ಸತ್ತಿರುವ ಬಗ್ಗೆ | ಲಾಗುತ್ತಿದೆ |
| 4 | ಏ ರಮಾಕಾಂತ್, ಐಎಫ್‌ಎಸ್ | ಬೀದರ್ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಕಾಮಗಾರಿಗಳಿಗಾಗಿ ಯಾವುದೇ ಆಧಾರವಿಲ್ಲದೆ ಹೆಚ್ಚಿನ ಮುಂಗಡ ಮಂಜೂರು ಮಾಡಿರುವ ಬಗ್ಗೆ | ಆರೋಪಿತ ಅಧಿಕಾರಿಗಳಿಂದ ಹಣ ವಸೂಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ನೀಡಲು ಅರಣ್ಯ ಇಲಾಖೆಯನ್ನು ಕೋರಲಾಗಿದ್ದು ಸದರಿ ಇಲಾಖೆಯಿಂದ ಮಾಹಿತಿ ನಿರೀಕ್ಷಿಸಲಾಗುತ್ತಿದೆ |
| 5 | ಬ್ರಿಜೇಶ್ ಕುಮಾರ್, ಐಎಫ್‌ಎಸ್ | ವಾರದ ಡೈರಿ ಸಲ್ಲಿಸದಿರುವ ಬಗ್ಗೆ ಹಾಗೂ ಸಭೆಗಳಿಗೆ ಹಾಜರಾಗದ ಬಗ್ಗೆ | ವಿಚಾರಣಾ ವರದಿ ಸ್ವೀಕೃತವಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ |
| 6 | ರಾಜ್‌ಕುಮಾರ್ ಶ್ರೀವಾಸ್ತವ, ಐಎಫ್‌ಎಸ್ | ನಾಳಾವನ್ನು ಬಿಡುಗಡೆ ಮಾಡಿರುವ ಬಗ್ಗೆ | ವ್ರಮು ಅ ನಂ ರವರ ಶಿಫಾರಸ್ಸಿನ ಮೇಲೆ ಅವಜೀ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ |
| 7 | ಕೆ ಎನ್ ಸಾಯಿಬಾಬಾ, ಐಎಫ್‌ಎಸ್ | ಇಲಾಖಾ ವಿಚಾರಣಾ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ಇತ್ಯರ್ಥ ಗೊಳಿಸದ ಬಗ್ಗೆ | ಆವಾದಿತ ಅಧಿಕಾರಿಗಳ ಉತ್ತರದ ಮೇಲೆ ಅವಜೀ ಇಲಾಖೆಯ |

| | | | |
|---|---|---|---|
| | | | ಅಭಿಪ್ರಾಯ ಕೋರಲಾಗಿದ್ದು ಮಾಹಿತಿ ನಿರೀಕ್ಷಿಸ ಲಾಗುತ್ತಿದೆ |
| 8 | ಎಸ್ ಡಿ ವಾರಕ್, ಐಎಫ್ಎಸ್ | ಬಿರ್ಲಾ ವೈರ್ ಖರೀದಿ ಮತ್ತು ಇತರೆ ಲೋಪಗಳ ಬಗ್ಗೆ | ಆಪಾದಿತ ಅಧಿಕಾರಿಗಳ ಉತ್ತರದ ಮೇಲೆ ಅವಜೀ ಇಲಾಖೆಯ ಅಭಿಪ್ರಾಯ ಕೋರಲಾಗಿದ್ದು ಮಾಹಿತಿ ನಿರೀಕ್ಷಿಸ ಲಾಗುತ್ತಿದೆ |

895(898) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲಾ ಕ್ರೀಡಾಂಗಣವು ಕ್ರೀಡಾಪಟುಗಳಿಗೆ ಟ್ರ್ಯಾಕ್ ಇಲ್ಲದೆ ಹಾಳಾಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಕ್ರೀಡಾಂಗಣದ, ಅಭಿವೃದ್ಧಿಗಾಗಿ ಕೈಗೊಂಡಿರುವ ಕ್ರಮವೇನು,

ಇ) ಕಳೆದ ಮೂರು ವರ್ಷಗಳಿಂದ ಈ ಕ್ರೀಡಾಂಗಣದ ಅಭಿವೃದ್ಧಿಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು,

ಈ) ಅಭಿವೃದ್ಧಿಗೆ ನಿಗದಿಸಿರುವ ಕಾಲಮಿತಿ ಏನು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ) ತುಮಕೂರು ಜಿಲ್ಲಾ ಕ್ರೀಡಾಂಗಣ ಪೂರ್ಣಗೊಂಡಿದ್ದು, ದಿನನಿತ್ಯ ಕ್ರೀಡಾಪಟುಗಳು ಕ್ರೀಡಾ ತರಬೇತಿ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಟ್ರ್ಯಾಕ್ ಉಪಯೋಗವಾಗುತ್ತಿದೆ ಕ್ರೀಡಾಂಗಣದಲ್ಲಿರುವ ಒಳಚರಂಡಿ ವ್ಯವಸ್ಥೆಯು ಸಾರ್ವಜನಿಕ ಸಭೆ ನಡೆದ ಸಂದರ್ಭದಲ್ಲಿ ಹಾಳಾಗಿರುತ್ತದೆ ಇದನ್ನು